# ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಗೌರಿಬಿದನೂರು

## ಸಿ.ಸಿ. ಸಂಖ್ಯೆ . 08/2022

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಲೋಕೇಶ್ | ಸಿ.ಡಬ್ಲ್ಯು | : | 03 |
| ತಂದೆ / ಗಂಡನ ಹೆಸರು | : | ಕೊಂಡಪ್ಪ | ಪಿ.ಡಬ್ಲ್ಯು | : | 02 |
| ವಯಸ್ಸು | : | 38 ವರ್ಷ | ಪ್ರಮಾಣೀಕರಿಸಿದ ದಿನಾಂಕ | : | 26.03.2026 |
| ವೃತ್ತಿ | : | ಕೂಲಿ ಕೆಲಸ | | | |
| ವಾಸಸ್ಥಳ | : | ಯರ್ರ ನಾಗೇನಹಳ್ಳಿ | | | |

<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>

ಚಾಸಾ 1,6 ರವರು ನಮ್ಮ ಊರಿನವರೆ. ಚಾಸಾ 2,4,5 ಯಾರು ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾರು ಎಂದು ನನಗೆ ಗೊತ್ತಿಲ್ಲ. ಆತನ ಪರಿಚಯ ಇರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 08.07.2021 ರ ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗೆ ನಾನು ಯಾವುದೋ ಕಾರಣಕ್ಕೆ ಪೋಲಿಸ್ ಠಾಣೆಗೆ ಹೋದಾಗ ಪೋಲಿಸರ ಹೇಳಿಕೆಯ ಮೇರೆಗೆ ಅದಕ್ಕೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಿ: 07.07.2021 ರಂದು ಮಧ್ಯಹ್ನ ಡಿ ಪಾಳ್ಯ ಹಾಲಿನ ಡೈರಿಯ ಬಳಿ ಅಪಘಾತ ವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ಸಹ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪೂರ್ಣಪ್ರಮಾಣದ ಪಾಟೀ ಸವಾಲಿಗೆ ಒಳಪಡಿಸಲು ಸ.ಸ.ಅ. ರವರು ಅನುಮತಿ ಕೋರಿದ್ದು, ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲು : ಸ.ಸ.ಅ. ರವರಿಂದ

ದಿ: **07.07.2021** ರಂದು ಮಧ್ಯಾಹ್ನ **12.30** ರ ಸಮಯದಲ್ಲಿ ನಾನು ಮತ್ತು ರವಿಕುಮಾರ್ ರವರು ಡಿ ಪಾಳ್ಯ ಹಾಲಿನ ಡೈರಿ ಬಳಿ ಮಾತನಾಡಿಕೊಂಡು ನಿಂತ್ತಿದ್ದಾಗ ವೇಣು ಗೋಪಾಲ್ ಬಿನ್ ಲೆ. ಲಕ್ಷ್ಮಯ್ಯ ರವರು ಕೆ ಎ **51** ಇ ಎ **684** ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು ಎಂದರೆ ಸರಿಯಲ್ಲ. ಆಗ ವಾಟದ ಹೊಸಹಳ್ಳಿ ಕಡೆಯಿಂದ ಕೆ ಎ **02** ಜಡ್ **6552** ಇಂಡಿಕ ಕಾರ್ ನ ಚಾಲಕನ ಅತಿವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ವೇಣುಗೋಪಾಲ್ ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ರವಿಕುಮಾರ್ ರವರು ವೇಣುಗೋಪಾಲ್ ರವರನ್ನು ನೋಡಲಾಗಿ ಸದರಿ ಯವರ ತಲೆಗೆ ಮತ್ತು ಮೈ ಕೈ ಗೆ ರಕ್ತ ಗಾಯಗಳಾಗಿದ್ದು ಹಾಗೂ ಅವರ **2** ಕಿವಿಗಳಲ್ಲಿ ರಕ್ತ ಬಂದು ಅವರು ಸ್ಥಳದಲ್ಲಿಯೇ ಮೃತ ಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ತದನಂತರ ಚಾಸಾ **1** ರವರು ಆರೋಪಿತನ ವಿರುದ್ದ ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿ: **08.07.2021** ರಂದು ಅಪಘಾತ ನಡೆದ ಸ್ಥಳದಲ್ಲಿ ಪೋಲಿಸರು ಮದ್ಯಾಹ್ನ **02.00** ಘಂಟೆ ಇಂದು **03.30** ರ ಸಮಯದಲ್ಲಿ ಅಮಾನತ್ತು ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ನಾನು ಹಾಜರು ಇದ್ದು, ಅಮಾನತ್ತು ಪಂಚನಾಮೆಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನೊಂದಿಗೆ ರವಿಕುಮಾರ್ ಬಿನ ರಾಮಕೃಷ್ಣಪ್ಪ ರವರು ಸಹ ಸಹಿ ಹಾಕಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ.  ಅಪಘಾತಕ್ಕೆ ಒಳಗಾದ ದ್ವಿಚಕ್ರ ವಾಹನ ಮತ್ತು ಇಂಡಿಕ ಕಾರ್ ನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಇದಕ್ಕೆ ಸಂಬಂಧಿಸಿದಂತೆ ದಿ: 08.07.2021 ರಂದು, “ನಾನು ಮೇಲ್ಕಂಡ ವಿಳಾಸದಲ್ಲಿ ವಾಸ ವಾಗಿರುತ್ತೇನೆ______________________ ಅಪಘಾತದಲ್ಲಿ ಬಾಗಿಯಾದ ವಾಹನಗಳನ್ನು ಮತ್ತು ಆರೋಪಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ.” ಎಂದು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.  ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

ಚಾಸಾ 1 ರವರು ಆರೋಪಿತನೊಂದಿಗೆ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>

<u>ಮರು ವಿಚಾರಣೆ : ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.